


# ಟೀವಿಯೂ ಕದಿಯುತ್ತೆ ವೈಯಕ್ತಿಕ ಮಾಹಿತಿ

ಮಾರುಕಟ್ಟೆಯಲ್ಲಿ ಲಭ್ಯವಿರುವ ಬಹುತೇಕ ಟೀವಿಗಳು ಈಗ ಸ್ಮಾರ್ಟ್ ರೂಪ ತಳೆದಿವೆ. ನೋಡಲು ಸ್ಮಾರ್ಟ್ ಆಗಿದ್ದರೂ ಅವು ಅಷ್ಟೇ ಸ್ಮಾರ್ಟ್ ಆಗಿ ನಮ್ಮ ವೈಯಕ್ತಿಕ ಮಾಹಿತಿಯನ್ನು ಕದಿಯುತ್ತಿವೆ ಎನ್ನುವುದು ಅಚ್ಚರಿಯಾದರೂ ಸತ್ಯ.

ಆಟೋಮ್ಯಾಟಿಕ್ ಕಂಟೆಂಟ್ ರೆಕಗ್ನೈಜೇಷನ್ (ಎಸಿಆರ್) ಎಂಬ ತಂತ್ರಾಂಶವು ಸ್ಮಾರ್ಟ್‌ಟೀವಿಗಳಲ್ಲಿ ಡಿಟಿಎಚ್, ಕೇಬಲ್, ಆನ್‌ಲೈನ್ ಹಾಗೂ ಸ್ಟ್ರೀಮಿಂಗ್ ಸರ್ವೀಸ್ ಮೂಲಕ ಪ್ರಸಾರವಾಗುವ ಮಾಹಿತಿ ದಾಖಲಿಸುತ್ತಿವೆ. ಟೀವಿ ನೋಡುವ ಹವ್ಯಾಸದ ಸಂಪೂರ್ಣ ಮಾಹಿತಿಯ ಮೇಲೆ ಇದು ನಿಗಾ ಇಟ್ಟಿದ್ದು, ಹೀಗೆ ಸಂಗ್ರಹಿಸಿಟ್ಟ ಮಾಹಿತಿಯನ್ನು ಜಾಹೀರಾತು ಏಜೆನ್ಸಿಗಳೊಂದಿಗೆ ಹಂಚಿಕೊಳ್ಳುವ ಸಂಬಂಧದ ಪ್ರಸ್ತಾಪಗಳು ಟೀವಿ ಪರದೆಗಳ ಮೇಲೆ ಆಗಾಗ (ಅಂತರ್ಜಾಲ ಸಂಪರ್ಕ ಇದ್ದಾಗ) ತೆರೆದುಕೊಳ್ಳುತ್ತವೆ. ಒಂದು ವೇಳೆ ಆ ಪ್ರಸ್ತಾಪಗಳೊಂದಿಗೆ ವ್ಯವಹರಿಸಿದರೆ ಟೀವಿ ವೀಕ್ಷಣೆ ಸಂಬಂಧದ ಕೆಲ ವೈಯಕ್ತಿಕ ಮಾಹಿತಿ ಮೂರನೆಯವರ ಪಾಲಾಗುತ್ತದೆ.

ಈಗ ಮಾರುಕಟ್ಟೆಗೆ ಬಂದಿರುವ ಬಹುತೇಕ ಟೀವಿಗಳಲ್ಲಿ ವೈ ಫೈ ಸವಲತ್ತು ಇರುತ್ತದೆ. ವೈ ಫೈಆನ್ ಮಾಡಿ ಯೂಟ್ಯೂಬ್, ನೆಟ್‌ಫ್ಲಿಕ್ಸ್, ಅಮೆಜಾನ್ ಪ್ಲೇ ಹೀಗೆ ಹಲವು ಆನ್‌ಲೈನ್ ಮಾರ್ಗಗಳ ಮೂಲಕ ವಿಡಿಯೊ, ಸಿನಿಮಾ ನೋಡುತ್ತೇವೆ. ಈ ಬಗ್ಗೆ ಸ್ಮಾರ್ಟ್ ಟೀವಿಗಳು ನಾವು ಯಾವ ಚಾನೆಲ್ ಅನ್ನು ಹೆಚ್ಚಾಗಿ ನೋಡುತ್ತೇವೆ, ಯಾವ ರೀತಿಯ ಸಿನಿಮಾ ನೋಡಬಯಸುತ್ತೇವೆ, ನಮ್ಮ ಇಷ್ಟಗಳೇನು ಎಂಬ ಮಾಹಿತಿಯನ್ನು ಗ್ರಹಿಸುತ್ತವೆ.

## ಕಡಿವಾಣ ಹೇಗೆ?

ಸ್ಮಾರ್ಟ್ ಟೀವಿಗಳು ನಿಮ್ಮ ವೈಯಕ್ತಿಕ ಮಾಹಿತಿ ಕದಿಯುವುದನ್ನು ತಡೆಗಟ್ಟುವ ವಿಧಾನ ಸುಲಭವಾದದ್ದು. ಒಂದೊಂದು ಬ್ರ್ಯಾಂಡ್‌ನ ಟೀವಿಗಳಲ್ಲಿ ಒಂದೊಂದು ರೀತಿಯ ಫೀಚರ್ ಇದ್ದು, ಮಾಹಿತಿ ಕದಿಯುವುದಕ್ಕೆ ಹೇಗೆ ಕಡಿವಾಣ ಹಾಕಬೇಕು ಎಂಬುದರ ಮಾಹಿತಿ ಇಲ್ಲಿದೆ ನೋಡಿ.

ಎಲ್‌ಜಿ: ಸೆಟ್ಟಿಂಗ್ಸ್‌ಗೆ ಹೋಗಿ ಲೈವ್ ಪ್ಲಸ್ ಆಪ್ಷನ್ ಅನ್ನು ಆಫ್ ಮಾಡಬೇಕು.

ಎಲ್‌ಜಿಯ ಹೊಸ ಮಾಡೆಲ್: ಟೀವಿಯ ಮೇನ್ ಮೆನು ಸ್ಕ್ರೀನ್‌ನ ಮೇಲಗಡೆಯ ಬದಿತುದಿಯಲ್ಲಿ ಕಾಣುವ ಸೆಟ್ಟಿಂಗ್ಸ್ ಆಪ್ಷನ್ ಕ್ಲಿಕ್ಕಿಸಿ. ಬಳಿಕ ಕಾಣುವ ಆಲ್ ಸೆಟ್ಟಿಂಗ್ಸ್‌ಗೆ ಹೋಗಿ ಜನರಲ್ ಆಪ್ಷನ್ ಕ್ಲಿಕ್ಕಿಸಿ ಹಾಗೆಯೇ ಸ್ಕ್ರಾಲ್ ಮಾಡಿದರೆ ಲೈವ್ ಪ್ಲಸ್ ಆಪ್ಷನ್ ಕಾಣುತ್ತದೆ. ಅದನ್ನು ಆಫ್ ಮಾಡಿ.

ಎಲ್‌ಜಿಯ ಹಳೆಯ ಮಾಡೆಲ್: ಯೂಸರ್ ಅಗ್ರಿಮೆಂಟ್ಸ್ ಆಪ್ಷನ್ ಕೆಳಗೆ ಕಾಣುವ ಬಳಕೆಯ ನಿಯಮಗಳು, ಗೌಪ್ಯತಾ ನೀತಿ, ಮಾಹಿತಿ ಪ್ರಸರಣ, ವೈಯಕ್ತಿಕ ಜಾಹೀರಾತು ಅನ್ನು ಆಫ್ ಮಾಡಿ.

ಸೋನಿ: ಇಂಟರಾಕ್ಟೀವ್ ಟೀವಿ ಸೆಟ್ಟಿಂಗ್ಸ್ ಅಥವಾ ಸಂಬಾ ಇಂಟರಾಕ್ಟೀವ್ ಟೀವಿ ಆಪ್ಷನ್ ಅನ್ನು ಆಫ್ ಮಾಡಿ.

ಸೋನಿ ಆ್ಯಂಡ್ರಾಯ್ಡ್ ಆಧಾರಿತ ಸ್ಮಾರ್ಟ್ ಟೀವಿ: ಸೆಟ್ಟಿಂಗ್ಸ್‌ನಲ್ಲಿ ಕಾಣುವ ಸಿಸ್ಟಂ ಪ್ರಿಫರೆನ್ಸಸ್ ಆಪ್ಷನ್‌ಗೆ ಹೋಗಿ ಇಂಟರಾಕ್ಟೀವ್ ಟೀವಿ ಸೆಟ್ಟಿಂಗ್ಸ್ ಅಥವಾ ಸಂಬಾ ಇಂಟರಾಕ್ಟೀವ್ ಟೀವಿ ಆಪ್ಷನ್ ಡಿಸೇಬಲ್ ಮಾಡಿ.

ಸೋನಿ ಹಳೆಯ ಟೀವಿ: ಸೆಟ್ಟಿಂಗ್ಸ್‌ನ ಪ್ರಿಫರೆನ್ಸಸ್ ಆಪ್ಷನ್ ಕ್ಲಿಕ್ಕಿಸಿದರೆ ಕಾಣುವ ಸೆಟಪ್ ಆಪ್ಷನ್‌ಗೆ ಹೋಗಿ. ಬಳಿಕ ಕಾಣುವ ನೆಟ್‌ವರ್ಕ್ ಆಪ್ಷನ್ ಮೇಲೆ ಕ್ಲಿಕ್ಕಿಸಿದರೆ ತೆರೆದುಕೊಳ್ಳುವ ಸಂಬಾ ಇಂಟರಾಕ್ಟೀವ್ ಟೀವಿ ಆಪ್ಷನ್ ಡಿಸೇಬಲ್ ಮಾಡಿ.

ಸ್ಯಾಮ್‌ಸಂಗ್: ವೀವಿಂಗ್ ಇನ್‌ಫಾರ್ಮೇಷನ್ ಸರ್ವೀಸಸ್ ಆಪ್ಷನ್ ಅನ್ನು ಆಫ್ ಮಾಡಿ.

ಸ್ಯಾಮ್‌ಸಾಂಗ್ ಸ್ಮಾರ್ಟ್ ಟೀವಿ: ಸೆಟ್ಟಿಂಗ್ಸ್‌ಗೆ ಹೋಗಿ ಸಪೋರ್ಟ್ ಆಪ್ಷನ್ ಕ್ಲಿಕ್ಕಿಸಿ ಸ್ಕ್ರಾಲ್ ಮಾಡಿದರೆ ವೀವಿಂಗ್ ಇನ್‌ಫಾರ್ಮೇಷನ್ ಸರ್ವೀಸಸ್ ಹಾಗೂ ವಾಯ್ಸ್ ರೆಕಗ್ನೈಜೇಷನ್ ಸರ್ವೀಸಸ್ ಅನ್ನು ಆಫ್ ಮಾಡಿ.

ಸ್ಯಾಮ್‌ಸಾಂಗ್ ಹಳೆಯ ಟೀವಿ: ಸೆಟ್ಟಿಂಗ್ಸ್‌ಗೆ ಹೋಗಿ ಸಪೋರ್ಟ್ ಆಪ್ಷನ್ ಕ್ಲಿಕ್ಕಿಸಿ ಸ್ಕ್ರಾಲ್ ಮಾಡಿದರೆ ಟರ್ಮ್ಸ್ ಆ್ಯಂಡ್ ಪಾಲಿಸಿ ಆಪ್ಷನ್ ಕಾಣುತ್ತದೆ. ಅದನ್ನು ಒತ್ತುವ ಮೂಲಕ ಮುಂದೆ ಸಾಗಿದರೆ ಕಾಣುವ ಸಿಂಕ್‌ಪ್ಲಸ್ ಹಾಗೂ ವಾಯ್ಸ್ ರೆಕಗ್ನೈಜೇಷನ್ ಸರ್ವೀಸಸ್ ಆಪ್ಷನ್ ಅನ್ನು ಆಫ್ ಮಾಡಿ.

■ ಸಿರಿ